**ಓ ಎಸ್ 17/2016** **ಪಿ.ಡಬ್ಲ್ಯೂ- 1**

**ದಿನಾಂಕಃ 02/04/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀಸವಾಲು - ಶ್ರೀ ಆರ್.ಡಿ.ಆರ್. ವಕೀಲರಿಂದ ಪ್ರತಿವಾದಿಯ ಪರವಾಗಿ.**

1ನೇ ಪ್ರತಿವಾದಿಯಾದ ಈರೇಗೌಡರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಈ ದಾವೆಯನ್ನು ಈರೇಗೌಡ ಹಾಗೂ ನಂಜಮ್ಮರವರ ವಿರುದ್ಧ ಹಾಕಿರುತ್ತೇನೆ. ದಾವೆ ಹಾಕಬೇಕಾದರೆ 1ನೇ ಪ್ರತಿವಾದಿಯ ತಂದೆಯ ಹೆಸರುನ್ನು ಬರೆಯಿಸಿರುತ್ತೇನೆ. ಅವರ ತಂದೆಯ ಹೆಸರನ್ನು ಬೊಮ್ಮಣ್ಣಯ್ಯ ಎಂದು ಬರೆಯಿಸಿರುತ್ತೇನೆ. ಬೋಮ್ಮೇಗೌಡರಿಗೆ 3 ಜನ ಅಂದರೆ ಅಪ್ಪಾಜೀ ಗೌಡ , ಕೂಗೇಗೌಡ ಹಾಗೂ ಈರೇಗೌಡ ಅಂದರೆ 1ನೇ ಪ್ರತಿವಾದಿ ಮಕ್ಕಳು ಎಂದರೆ ಸರಿ . ಸದರಿ 3 ಜನರ ತಾತನ ಹೆಸರು ಬಸವೇಗೌಡ ಎಂದರೆ ಸರಿಯಲ್ಲ. ಬಂಡಿಶೆಟ್ಟಿಯಲ್ಲಿ ಗ್ರಾಮದ ಸರ್ವೆ ನಂ. 173 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ನಲ್ಲಿ ಒಟ್ಟು 5 ಎಕರೆ 35 ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ 5 ಗುಂಟೆ ಖರಾಬು ಕಳೆದು 5 ಎಕರೆ 30 ಗುಂಟೆ ಉಳಿಕೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 173 ದುರಸ್ತಾಗಿ 6 ಪೋಡ್ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.173/1 ರಲ್ಲಿ 3 ಎಕರೆ 10 ಗುಂಟೆ, ಸರ್ವೆ ನಂ. 173/2

ರಲ್ಲಿ 20 ಗುಂಟೆ, ಸರ್ವೆ ನಂ.173/3 ರಲ್ಲಿ 20 ಗುಂಟೆ, ಸರ್ವೆ ನಂ. 173/4 ರಲ್ಲಿ 2 ಗುಂಟೆ, ಸರ್ವೆ ನಂ.173/5 ರಲ್ಲಿ 1 ಗುಂಟೆ ಹಾಗೂ ಸರ್ವೆ ನಂ.173/6 ರಲ್ಲಿ 1 ಎಕರೆ 22 ಗುಂಟೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.173/1 ರಲ್ಲಿ 1 ಮತ್ತು ಸರ್ವೆ ನಂ.173/3 ರ ಸ್ವತ್ತುಗಳು ಬಸವೇಗೌಡ ಬಿನ್ ದ್ಯಾವೇಗೌಡರಿಗೆ ಸೇರಿದ್ದು ಎಂದರೆ ಸಾಕ್ಷಿಯು ಬಸವೇಗೌಡರ ಸ್ವತ್ತು ಸರ್ವೆ ನಂ.173/4 ರಲ್ಲಿ 1 ಗುಂಟೆ ಇರುವುದು ಎಂದು ನುಡಿಯುತ್ತಾರೆ. ಸರ್ವೆ ನಂ.173/2 ಹಾಗೂ ಸರ್ವೆ ನಂ.173/4 ರ ಸ್ವತ್ತುಗಳು ಬೋಮ್ಮೇಗೌಡ ಬಿನ್ ಬಸವೇಗೌಡರಿಗೆ ಸೇರಿದ ಸ್ವತ್ತುಗಳು ಎಂದರೆ ಸಾಕ್ಷಿಯು ಸರ್ವೆ ನಂ.173/4 ರಲ್ಲಿ 2 ಗುಂಟೆ ಕೃಷ್ಣೇಗೌಡರಿಗೆ ಸೇರಿದ ಸ್ವತ್ತು, 1990-91ನೇ ಸಾಲಿನಲ್ಲಿ ಸದರಿ ಸ್ವತ್ತಿನ ಮೇಲೆ ನಾನು ಸಾಲ ತೆಗೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ಸ್ವತ್ತು ವಿಭಾಗದ ಮೂಲಕ ಬಂದಿರುತ್ತದೆ. ಅದು ಪಿತ್ರಾರ್ಜಿಜಿತ ಆಸ್ತಿ. ಸದರಿ ವಿಭಾಗ ಪತ್ರ ನನ್ನ ಬಳಿ ಇರುತ್ತದೆ. ಸಾಕ್ಷಿಯು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರವನ್ನು ಎಲ್ಲಾ ಕೇಸ್ ಗಳಲ್ಲಿಯೂ ಹಾಜರುಪಡಿಸಿರುತ್ತೇನೆ. 1990-91 ನೇ ಸಾಲಿನಲ್ಲಿ ಸಾಲ ತೆಗೆದುಕೊಂಡಿರುತ್ತೇನೆ ಎನ್ನುವುದಕ್ಕೆ ಸಂಬಂಧಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಸಾಲವನ್ನು ನಾನು ಎಲೆಚಾಗಹಳ್ಳಿಯ ಕೆನರಾ ಬ್ಯಾಂಕ್ ನಲ್ಲಿ ತೆಗೆದುಕೊಂಡಿರುತ್ತೇನೆ. ಸದರಿ ಸಾಲ ಇನ್ನು ತಿರುವಳಿಯಾಗಿಲ್ಲ. ನಾನು ಸರ್ವೆ ನಂ.173/4, 115, 115/3, 172 ಈ ಸರ್ವೆ ನಂಬರ್ ಸ್ವತ್ತುಗಳ ಮೇಲೆ ಸಾಲ ತೆಗೆದುಕೊಂಡಿರುತ್ತೇನೆ. ಈ ಎಲ್ಲಾ ಸರ್ವೆ ನಂಬರ್ ಸ್ವತ್ತುಗಳ ಮೇಲೆ ಕೆನರಾ ಬ್ಯಾಂಕ್ ಎಲೆಚಾಗಹಳ್ಳಿ ಇಲ್ಲಿ ಸಾಲವನ್ನು ತೆಗೆದುಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.173/5 ರ ಸ್ವತ್ತು ಬಸವ ಬಿನ್ ಈರೇಗೌಡ ಇವರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೆ ನಂ.173/6 ರ ಸ್ವತ್ತು ಅಪ್ಪಣ್ಣೇಗೌಡ ಬಿನ್ ಪುಟ್ಟೇಗೌಡರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ.

1ನೇ ಪ್ರತಿವಾದಿಯ ಅಣ್ಣತಮ್ಮಂದಿರು ಅವರ ಕುಟುಂಬ ಸ್ವತ್ತುಗಳನೆಲ್ಲಾ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಪ್ಪಾಜಿ ಗೌಡ ಹಾಗೂ ಕೂಗೇಗೌಡ ಪ್ರಸ್ತುತ ಬದುಕಿಲ್ಲ. ಅಪ್ಪಾಜಿ ಗೌಡ , ಕೂಗೇಗೌಡ ಹಾಗೂ 1ನೇ ಪ್ರತಿವಾದಿ ಬದುಕಿದ್ದಾಗ ಒಟ್ಟು

ಕುಟುಂಬದಲ್ಲಿಯೇ ವಾಸವಾಗಿದ್ದರೋ ಅಥವಾ ಪ್ರತ್ಯೇಕವಾಗಿ ವಾಸವಾಗಿದ್ದರೋ  ಎಂದರೆ ಸಾಕ್ಷಿಯು ಅಪ್ಪಾಜಿ ಗೌಡ ಹಾಗೂ ಕೂಗೇಗೌಡ ಮರಣ ಹೊಂದುವ ಕಾಲಕ್ಕೆ ಅವರು ಪ್ರತ್ಯೇಕವಾಗಿ ವಾಸವಾಗಿದ್ದರು ಎಂದು ನುಡಿಯುತ್ತಾರೆ.  ನಿಮಗೆ ತಿಳಿದ ಹಾಗೇ ಅಪ್ಪಾಜಿ ಗೌಡ , ಕೂಗೇಗೌಡ ಹಾಗೂ 1ನೇ ಪ್ರತಿವಾದಿ ಎಷ್ಟು ವರ್ಷಗಳಿಂದ ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.  ಸದರಿ 3 ಜನ ಬದುಕಿದ್ದಾಗ ಅವರ ಜಮೀನುಗಳನ್ನು ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದರು.

ಬೋಮ್ಮೇಗೌಡರಿಗೆ ಬಂಡಿಶೆಟ್ಟಿಹಳ್ಳಿ ಗ್ರಾಮದ  ಸರ್ವೆ ನಂ.173/2 ರಲ್ಲಿ 13 ಗುಂಟೆ,  ಸರ್ವೆ ನಂ.172/5 ರಲ್ಲಿ 1 ಎಕರೆ 20 ಗುಂಟೆ,  ಸರ್ವೆ ನಂ.142 ರಲ್ಲಿ 3 ಎಕರೆ 34 ಗುಂಟೆ,  ಸರ್ವೆ ನಂ.173/4 ರಲ್ಲಿ 2 ಗುಂಟೆ,  ಸರ್ವೆ ನಂ.117 ರಲ್ಲಿ 3 ಎಕರೆ 8 ಗುಂಟೆ ಹಾಗೂ  ಸರ್ವೆ ನಂ.163 ರಲ್ಲಿ 16 ಗುಂಟೆ ಸ್ವತ್ತು ಇತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದು, ಬೋಮ್ಮೇಗೌಡ ಎಂದರೆ ನನ್ನ ತಾತ, 1ನೇ ಪ್ರತಿವಾದಿಯ ತಂದೆ ಬೋಮ್ಮಣ್ಣಯ್ಯ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ 1ನೇ ಪ್ರತಿವಾದಿಯ ತಂದೆಯ ಹೆಸರನ್ನು ಬೋಮ್ಮಣ್ಣಯ್ಯ ಎಂದೇ ಬರೆಯಿಸಲಾಗಿದೆ. ಬೋಮ್ಮೇಗೌಡರವರು ಮರಣ ಹೊಂದಿದ ನಂತರ 1980-81ನೇ ಸಾಲಿನಲ್ಲಿ  ಅವರ 3 ಮಕ್ಕಳ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖಾತೆಯ ಪ್ರಕಾರ 1ನೇ ಪ್ರತಿವಾದಿಗೆ ಸರ್ವೆ ನಂ.172/5 ರಲ್ಲಿ 20 ಗುಂಟೆ ,  ಸರ್ವೆ ನಂ. 142 ರಲ್ಲಿ 1 ಎಕರೆ 7 ವರೆ ಗುಂಟೆ,  ಸರ್ವೆ ನಂ. 173/4 ರಲ್ಲಿ ಅರ್ಧ ಗುಂಟೆ,  ಸರ್ವೆ ನಂ.117 ರಲ್ಲಿ 1 ಎಕರೆ 4 ಗುಂಟೆ ಹಾಗೂ  ಸರ್ವೆ ನಂ. 163 ರಲ್ಲಿ 5 ಕಾಲು ಗುಂಟೆ ಖಾತೆಯಾಗಿ ಅವರು ಶಾಂತಿಯುತ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಅಣ್ಣನಾದ ಅಪ್ಪಾಜೀ ಗೌಡರ ಹಿಸ್ಸೆಗೆ ಬಂದ ಸ್ವತ್ತುಗಳನ್ನು ಅವರ ಮಕ್ಕಳುಗಳು ದಿ.16.12.1998 ರಂದು ಪಂಚಾಯತ್ ಪಾಲುಪರಿಕತ್ ಯ ಮೂಲಕ ವಿಭಾಗ ಪತ್ರದ ಮೂಲಕ ಹಿಸ್ಸೆ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದೇವರಾಜೇಗೌಡ ಹಾಗೂ ಬಸವೇಗೌಡರ ವಿರುಧ್ಧ ನಾನು ಅ.ದಾವ ಸಂಖ್ಯೆ 42/2017 ರಂತೆ ದಾವೆಯನ್ನು ಹಾಕಿದ್ದೆ ಎಂದರೆ ಸರಿ . ಸದರಿ ದಾವೆಯಲ್ಲಿ ನನ್ನ ಪರ ವಿಚಾರಣೆ ಮುಗಿದು, ಸದರಿ

ದಾವೆಯ ಪ್ರತಿವಾದಿಯರ ಪರವಾಗಿ ದಿ.16.12.1998 ರ ಪಾಲುಪಟ್ಟಿಯನ್ನು ನಿಶಾನೆಗೊಳಿಸಿದ ಸದರಿ ದಾವೆಯನ್ನು ನೀವು ವಾಪಸ್ಸು ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ನಾನು ಸದರಿ ದಾವೆಯನ್ನು ವಾಪಸ್ಸು ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ಸದರಿ ಪಂಚಾಯ್ತಿ ಪಾಲುಪಟ್ಟಿಯ ಪ್ರಕಾರ ಸರ್ವೆ ನಂ.173/4 ರಲ್ಲಿ ಮುಕ್ಕಾಲು ಗುಂಟೆ ಸ್ವತ್ತು ಬಸವೇಗೌಡ ಹಾಗೂ ದೇವರಾಜೇಗೌಡರ ಜಂಟಿ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.173/4 ರ ಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಕುಟುಂಬಕ್ಕೆ ಸೇರಿದ ಸರ್ವೆ ನಂ.173/4 ರ ಸ್ವತ್ತನ್ನು ಲಪಟಾಯಿಸಬೇಕೆಂದು ನಾನು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಳೆನರಸೀಪುರ.